ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.

ಸಿ.ಸಿ. ಸಂಃ **157/2024**

| | | |
|---|---|---|
| ಸಾಕ್ಷಿಯ ಹೆಸರುಃ | ರವಿ ಹೆಚ್.ಎಂ | DW-1 |
| ತಂದೆಯ ಹೆಸರುಃ | ಮಹೇಶ್ವರ | |
| ವಯಸ್ಸುಃ | 59 ವರ್ಷ | ಪ್ರಮಾಣೀಕರಿಸಿದ ದಿಃ 09.03.2026 |
| ಉದ್ಯೋಗಃ | ಶಿಕ್ಷಕರು | |
| ವಾಸ ಸ್ಥಳಃ | ಆವರ್ತಿ ಗ್ರಾಮ, ಪಿರಿಯಾಪಟ್ಟಣ ತಾಃ | |

ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದಃ

1. ದೂರುದಾರ ಸಂಸ್ಥೆಯಲ್ಲಿ 2018 ರಲ್ಲಿ ಸದಸ್ಯನಾಗಿ ಚೀಟಿ ಹಾಕಿರುತ್ತೇನೆ.
2. ನಾನು ದಿಃ 20.11.2019 ರಂದು ಚೀಟಿ ಪಡೆದಿದ್ದೆ. ನಾವು ಒಟ್ಟು 20 ಜನರು ಚೀಟಿಗೆ ಸದಸ್ಯರಾಗಿದ್ದೆವು.
3. ನಾನು 2 ಲಕ್ಷ 51 ಸಾವಿರ ಚೀಟಿ ಪಡೆದಿರುತ್ತೇನೆ. ಒಟ್ಟು 3 ಲಕ್ಷದ ಚೀಟಿಯಾಗಿದ್ದು, ನಾನು ಸದರಿ ಚೀಟಿಯ ಎಲ್ಲಾ ಕಂತುಗಳನ್ನು ಕಟ್ಟಿರುತ್ತೇನೆ.
4. ನಾನು ಚೀಟಿ ಪಡೆಯುವಾಗ ಒಂದು ಪ್ರೊನೋಟ್ ಹಾಗೂ 2 ಚೆಕ್ಕುಗಳನ್ನು ನೀಡಿದ್ದೆ.
5. ನಾನು ಚೀಟಿಯನ್ನು ಚೆಕ್ ಮುಖಾಂತರ ಹಾಗೂ ನಗದು ಮೂಲಕ ಕಟ್ಟುತ್ತಿದ್ದೆ. ಆ ಬಗ್ಗೆ ಅವರು ಪಾಸ್ ಬುಕ್ ನೀಡಿದ್ದರು.
6. ನಾನು ಪಾಸ್ ಬುಕ್ ಮೂಲಕ ತಿಂಗಳಿಗೆ 15 ಸಾವಿರದಂತೆ 16 ಕಂತುಗಳನ್ನು ಕಟ್ಟಿದ್ದೆ. ಉಳಿಕೆ ಹಣವನ್ನು ನವನಗರ ಬ್ಯಾಂಕಿನ ಮೂಲಕ ಸಂಸ್ಥೆಯ ಅಧ್ಯಕ್ಷರಾದ ಸುಮಿತ್ರಾ ಸ್ವಾಮಿ ರವರ ಖಾತೆಗೆ ಚೆಕ್ ಮೂಲಕ ಕಟ್ಟಿದ್ದೇನೆ.
7. ನಾನು ಒಟ್ಟು ಪೂರ್ತಿ 20 ತಿಂಗಳ ಕಂತನ್ನು ಕಟ್ಟಿರುತ್ತೇನೆ.
8. ದೂರುದಾರರು ಕಳುಹಿಸಿದ ನೋಟೀಸು ನನಗೆ ಬಂದಿತ್ತು. ಸದರಿ ನೋಟೀಸು ಬರುವ ಮುಂಚೆ ನಾನು ಪೂರ್ತಿ ಹಣ ಕಟ್ಟಿರುತ್ತೇನೆ.
9. ನಿಪಿ - 1 ರ ಚೆಕ್ ಹಾಗೂ ಅದರ ಮೇಲಿರುವ ಸಹಿ ನನ್ನದು. ಆದರೆ ಚೆಕ್ ಮೇಲೆ ಇರುವ ಬರವಣಿಗೆ ನನ್ನದಲ್ಲ. ಇನ್ನೊಂದು ಚೆಕ್ಕನ್ನು ದೂರುದಾರರು ಇಟ್ಟುಕೊಂಡಿದ್ದಾರೆ.
10. ನಾನು ಪಡೆದ ಚೀಟಿ ಹಣವನ್ನು ಪೂರ್ತಿ ಕಟ್ಟಿದ್ದು, ನಾನು ಯಾವುದೇ ಹಣ ದೂರುದಾರರಿಗೆ ಈಗ ಕೊಡುವುದು ಬಾಕಿ ಇಲ್ಲ.

11. ಕಾರಣ ಸದರಿ ಸುಳ್ಳು ದೂರನ್ನು ವಜಾ ಮಾಡಿಕೊಡಬೇಕಾಗಿ ಈ ಮೂಲಕ ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

**(ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು
ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ